ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 3, November-December, 2023, Pp. 14-24.
©*IIMRD*, Mysuru

www.iimrd.com

# ಲಿಂಗತ್ವ ಅಲ್ಪಸಂಖ್ಯಾತರ ಸ್ತ್ರೀತ್ವದ ಅಸ್ಮಿತೆಯ ಒಳ ಅರಿವು: ಒಂದು ಚಾರಿತ್ರಿಕ ನೋಟ

**ದೀಪಬುದ್ಧೆ ಹೆಚ್.ಜಿ*** & **ಪ್ರೊ.ಜೆ.ಸೋಮಶೇಖರ್****
*ಸಂಶೋಧನಾ ವಿದ್ಯಾರ್ಥಿ & **ನಿರ್ದೇಶಕರು
ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

**ಸಾರಾಂಶ: (Abstract)**

*ಭಾರತದಲ್ಲಿ ಟ್ರಾನ್ಸ್ ವ್ಯಕ್ತಿಗಳ ಅಥವಾ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರ ಅಸ್ಮಿತೆ 4000 ವರ್ಷಗಳ ದಾಖಲೆಯ ಇತಿಹಾಸವನ್ನು ಹೊಂದಿದೆ. ಹಾಗಾಗಿ ಈ ದಾಖಲೆಗಳಲ್ಲಿ ಪ್ರಾಚೀನ ಗ್ರಂಥಗಳು ಲೈಂಗಿಕತೆ ವೈವಿಧ್ಯತೆಯನ್ನು ಉಲ್ಲೇಖಿಸಲ್ಪಡುವ ಪ್ರಮುಖ ಆಧಾರವಾಗಿದೆ. ಹೀಗೆ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಟ್ರಾನ್ಸ್‌ಜೆಂಡರ್ ಸಮುದಾಯವನ್ನು ಭಾರತ ದೇಶದಲ್ಲಿನ ಕಾನೂನಿನ ಪ್ರಕಾರ ತೃತೀಯ ಲಿಂಗಿಗಳೆಂದು ಕರೆಯಲಾಗುತ್ತಿದೆ. ಇದೇ ಮಾದರಿಯಲ್ಲಿ ಇವರನ್ನು ಬಾಂಗ್ಲದೇಶ ಮತ್ತು ಪಾಕಿಸ್ತಾನದಂತಹ ಇತರ ದಕ್ಷಿಣ ಏಷ್ಯಾದ ದೇಶಗಳು ಸಹ ಹಿಜ್ರಾಗಳು ಎಂದು ಕರೆಯುವ ಮೂಲಕ ಮೂರನೇ ಲಿಂಗ ಎಂದು ಗುರುತಿಸಿದೆ. ಹೀಗೆ ಗುರುತಿಸಲ್ಪಟ್ಟ ಸಮಾಜದ ಕಟ್ಟಕಡೆಯಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರು ಜೀವನ ಪರ್ಯಾಂತ ನೊವುಂಡ ಜೀವನ ಇವರದ್ದಾಗಿದ್ದು ಹೆಣ್ಣು ಗಂಡೆಂದು ಗುರುತಿಸಿಕೊಂಡು ಬದುಕು ನಡೆಸುತ್ತಿರುವುದು ಕಂಡು ಬಂದಿರುತ್ತದೆ.*

**ಮುಖ್ಯಪದಗಳು (Keywords):** ಟ್ರಾನ್ಸ್‌ಜೆಂಡರ್, ಲಿಂಗತ್ವ ಅಲ್ಪಸಂಖ್ಯಾತರು, ಸ್ತ್ರೀತ್ವದ ಅಸ್ಮಿತೆ.

## ಪೀಠಿಕೆ

ಪ್ರಪಂಚದಾದ್ಯಂತ ಸಂಸ್ಕೃತಿಗಳಲ್ಲಿ ಪ್ರಾಚೀನ ಸಮಾಜದಿಂದಲೂ ಲಿಂಗತ್ವ ಅಲ್ಪಸಂಖ್ಯಾತರು ಮತ್ತು ಟ್ರಾನ್ಸ್‌ಜೆಂಡರ್ಸ್ ವ್ಯಕ್ತಿಗಳನ್ನು ಗುರುತಿಸಲಾಗಿದೆ. ಲಿಂಗತ್ವ ಅಲ್ಪಸಂಖ್ಯಾತರ ಜೀವನದ ಪರಿಸ್ಥಿತಿಯು ಅವಲೋಕಿಸಿ ನೋಡುವುದಾದರೆ ಅವರ ಅಸ್ಮಿತೆಯ ಅಳತೆಯು ಬಹಳ ಜನರು ಕುಚೇಷ್ಟೆಯಲ್ಲಿ ತಪ್ಪು ಗ್ರಹಿಸುತ್ತಾರೆ. ಬದುಕಿರುವವರೆಗೂ ತಿರಸ್ಕಾರ, ಬಹಿಷ್ಕಾರ, ಹಿಂಸೆ, ಅಗಲಿಕೆ, ಅಲೆದಾಟ ಇವೆಲ್ಲದರ ಅವಮಾನದ ವಿಡಂಭನೆ, ಅದಕ್ಕಾಗಿ ಒಂದಷ್ಟು ಕಾಲ ಅಸಹಾಯಕ ಹೋರಾಟ, ಜಿಗುಪ್ಸೆಯ ಜೀವನ, ಕಡೆಗೆ ಅಗಲಿದಾಗಲೂ ಅಂಗಿಲ್ಲದ ಪರದಾಟ. ಹೀಗೆ ಹುಟ್ಟಿದ ಹಂತದಲ್ಲಿ ಅಂಟಿಕೊಂಡ ಲಿಂಗಸೂಕ್ಷ್ಮತೆ ಬದುಕಿನ ಕೊನೆಯವರೆಗೂ ಪ್ರಶ್ನಾತೀತವಾಗಿ ಎದುರೊಡ್ಡುವ ಜಂಜಾಟದಲ್ಲೂ ಆಂತರ್ಯದೊಳಗೆ ಹೆಣ್ಣಾಗಿಯೆ ಎಂಬುದು ಮಾತ್ರ ನಿಶ್ಚಯ. ಬದುಕೆ ಹೀಗೆ ಇತಿಹಾಸದುದ್ದಕ್ಕೂ ಇವರೊಳಗಿನ ಜಗತ್ತಿಗೆ ಮತ್ತು ಹೊರಗಿನ

*Please cite this article as: ದೀಪಬುದ್ಧೆ ಹೆಚ್.ಜಿ & ಜೆ.ಸೋಮಶೇಖರ್.* (2023). ಲಿಂಗತ್ವ ಅಲ್ಪಸಂಖ್ಯಾತರ ಸ್ತ್ರೀತ್ವದ ಅಸ್ಮಿತೆಯ ಒಳ ಅರಿವು: ಒಂದು ಚಾರಿತ್ರಿಕ ನೋಟ.ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(3). ಪು.ಸಂ.* 14–24

ಪ್ರಪಂಚದ ನಡುವೆ ದ್ವಂದ್ವಾತ್ಮ ಸಂಘರ್ಷವನ್ನು ಎದುರಿಸಬೇಕಾಗುತ್ತದೆ. ಇಂತಹ ಲೈಂಗಿಕತೆ ಮತ್ತು ಲಿಂಗತ್ವ ಆಧಾರಿತ ಅಲ್ಪಸಂಖ್ಯಾತರ ಅಸ್ತಿತ್ವದ ಚಾರಿತ್ರಿಕ ನೆಲೆಯನ್ನು ಸಾಕ್ಷೀಕರಿಸಲು ಪ್ರಾಚೀನ ಅಸ್ಸೀರಿಯ, ಈಜಿಪ್ಟ್, ರೋಮ್, ಗ್ರೀಕ್, ಚೀನ ಮತ್ತು ಭಾರತದಂತಹ ಇನ್ನೂ ಅನೇಕ ದೇಶಗಳ ಇತಿಹಾಸದುದ್ದಕ್ಕೂ ಪುರಾಣಗಳಲ್ಲಿ, ಧಾರ್ಮಿಕ ಗ್ರಂಥಗಳಲ್ಲಿ, ಪುರಾತನ ಸಾಹಿತ್ಯಗಳಲ್ಲಿ, ಶಿಲ್ಪಕಲೆಗಳಲ್ಲಿ ವಿದೇಶಿಯರ ಲೇಖನಗಳಲ್ಲಿ ಸಾಕಷ್ಟು ಪುರಾವೆಗಳು ಲಭಿಸುತ್ತವೆ.

**ಲಿಂಗತ್ವ ಅಲ್ಪಸಂಖ್ಯಾತರ ಐತಿಹ್ಯ**

ಭಾರತದಲ್ಲಿ ಟ್ರಾನ್ಸ್ ವ್ಯಕ್ತಿಗಳ ಅಥವಾ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರ ಅಸ್ಮಿತೆ 4000 ವರ್ಷಗಳ ದಾಖಲೆಯ ಇತಿಹಾಸವನ್ನು ಹೊಂದಿದೆ. ಲಿಂಗ, ಲಿಂಗ ಗುರುತಿಸುವಿಕೆ, ಲಿಂಗತ್ವ, ಲೈಂಗಿಕತೆ ಈ ಆಧುನಿಕ ಪದಗಳು 1950 ಮತ್ತು 1960ರ ದಶಕದಿಂದೀಚೆಗೆ ಈ ಸಮುದಾಯದವರ ಅಸ್ಮಿತೆ ಕಾಣಲು ಪ್ರಚಾರ ಕಾರ್ಯ ನಿರ್ವಹಿಸಿದವು. ಆದರೆ ನಾವು ಈಗ ಬಳಸುತ್ತಿರುವ ಲಿಂಗತ್ವದ ಪರಿಕಲ್ಪನೆಯು 1970ರ ದಶಕದ ಆರಂಭದಲ್ಲಿ ಸಾಮಾನ್ಯ ಭಾಷೆಗೆ ಬಂದಿತು.[1] ತನ್ನದೆಯಾದ ಲಿಂಗಸೂಕ್ಷ್ಮತೆಯಲ್ಲಿ ಗುರುತಿಸಿಕೊಳ್ಳುವ ಇವರು ಮಾನಸಿಕ, ದೈಹಿಕ ಮತ್ತು ಭಾವನಾತ್ಮಕವಾಗಿ ತ್ರಿನೋಟದಲ್ಲೂ ಒಂದಕ್ಕೊಂದು ಪರಸ್ಪರ ಸಂಬಂಧದಲ್ಲಿ ಆತ್ಮಸ್ಥೈರ್ಯಕ್ಕೆ ವಿರೋಧ ವ್ಯಕ್ತ ಪಡಿಸುತ್ತಾ ಸಮಾಜದ ಎದುರಾಗಿ ನಿಲ್ಲುತ್ತದೆ. ತ್ರಿಶಂಕು ಸ್ಥಿತಿಯಲ್ಲಿರುವ ಇವರು ಅನುಭವಿಸುವ ನೋವು–ನಲಿವು, ಸಂತೋಷ–ಸಡಗರ, ಸಂಭ್ರಮದಲ್ಲಿ ಅರಮನೆಗಳ ನಾಟ್ಯ ಶಾಲೆ, ನೃತ್ಯ ಕಲೆಗಳಲ್ಲಿ, ದೇವರ ದಾಸ–ದಾಸಿಯರು ಜೋಗಪ್ಪ–ಜೋಗತಿಯರು ಹೀಗೆ ಹಲವಾರು ರೀತಿ–ನೀತಿ ವಿಧಿ ವಿಧಾನಗಳ ಮೂಲಕ ತನ್ನದೆಯಾದ ಕುರುಹುಗಳಲ್ಲಿ ಕಾಣಿಸಲ್ಪಟ್ಟಿದ್ದಾರೆ. ಗಂಡು ಹೆಣ್ಣಿನ ವಿವಿಧ ಕಾಮಭಂಗಿಗಳನ್ನು, ಸಲಿಂಗಕಾಮವನ್ನು ಒಳಗೊಂಡಂತೆ ಖಜರಾಹೊ, ಕೊನಾರ್ಕ್ ಮೊದಲಾದ ದೇವಲಾಯಗಳಲ್ಲಿಯು ಪ್ರತ್ಯಕ್ಷೀಕರಿಸಲಾಗಿದೆ. ಇದು ಇತಿಹಾಸದುದ್ದಕ್ಕೂ ಭಾರತದ ಉಪಖಂಡದಲ್ಲಿ ಹಿಜ್ರಾಗಳು ಸಲಿಂಗಕಾಮ ಪ್ರಚಲಿತದಲ್ಲಿತ್ತಲ್ಲದೆ, ಯಾವ ಬಗೆಯಲ್ಲೂ ಅದನ್ನು ನಿಕೃಷ್ಟವೆಂದು ಪರಿಗಣಿಸಲಾಗಿಲ್ಲ. ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಮನುಸ್ಮೃತಿಯಲ್ಲಿ ಅದೊಂದು ಕ್ಷುಲ್ಲಕ ಅಪರಾಧವೆಂದು ಪರಿಗಣಿಸಲಾಗಿದೆ.

ವೇದಗಳು ಹಾಗೂ ಕಾಮಸೂತ್ರದ ಪ್ರಕಾರ ಮನುಷ್ಯನ ಪ್ರಕೃತಿಯು ಪುಂಸ ಪ್ರಕೃತಿ, ಸ್ತ್ರೀ ಪ್ರಕೃತಿ ಹಾಗೂ ತೃತೀಯ ಪ್ರಕೃತಿ ಎಂದು ಮೂರು ವಿಧಗಳಿವೆ. ಕ್ರಿ.ಪೂ.600ರ 'ಸುಶ್ರುತ ಸಂಹಿತೆ'ಯು ಕುಂಭಿಕಾ ಮತ್ತು ಅಸೇಕ್ಯ ಎಂಬ ಎರಡು ವಿಧದಲ್ಲಿ ಸಲಿಂಗ ಕಾಮವನ್ನು ಆರ್ಯಭಟ್ಟಚಾರ್ಯನು ನಮೂದಿಸಿರುವುದು ಕಾಣಸಿಗುತ್ತದೆ [2] 'ಕುಂಭಿಕಾ' ಎಂದರೆ ಗುದ ಸಂಭೋಗದಲ್ಲಿ ಗಂಡಸು ಇನ್ನೊಬ್ಬನಿಗೆ ಸಹಕರಿಸುವುದು ಎಂದಾದರೆ 'ಅಸೇಕ್ಯ' ಎಂಬುದು ಇತರ ಗಂಡಸರ ವೀರ್ಯವನ್ನು ಕುಡಿಯುವುದು ಎಂದರ್ಥವಾಗುತ್ತದೆ. ಕನಿಷ್ಠ ಅರ್ಧ ಮಿಲಿಯನ್ ಹಿಜ್ರಾಗಳು ಭಾರತದಲ್ಲಿ ವಾಸಿಸುತ್ತಿದ್ದರು ಮತ್ತು ಇನ್ನೊಂದು ಅರ್ಧ ಮಿಲಿಯನ್ ಬಾಂಗ್ಲಾದೇಶದಲ್ಲಿ 3ನೇ ಲಿಂಗದವರು ವಾಸಿಸುತ್ತಿದ್ದರು ಎಂದು ಗುರುತಿಸಲಾಗಿದೆ. ಥೈಲಾಂಡ್

[1] Jane Pilcher and Imelda whelehan. (2013). *Fifty Key Concepts in Gender studies.* P.56
[2] ಫ್ರೈಡ್ ಆಫ್ ಇಂಡಿಯಾ (2012). *ಭಾರತೀಯ ವೈಜ್ಞಾನಿಕ ಪರಂಪರೆಯ ಒಂದು ಇಣುಕು ನೋಟ.* ಪು.131

ನಲ್ಲಿ ಅನೇಕ ಟ್ರಾನ್ಸ್ ಜನರನ್ನು ಸ್ವೀಕರಿಸಲಾಗಿದೆ ಎಂಬ ಮಾಹಿತಿಯೊಂದಿಗೆ, ಅರೇಬಿಯಾದಲ್ಲಿ ಖನಿತ್ ಎಂಬ ಹೆಸರಿನಲ್ಲಿ ಕ್ರಿ.ಪೂ. 600 ರಿಂದ ದೃಢೀಕರಿಸಿದ 3ನೇ ಲಿಂಗ ಪಾತ್ರವನ್ನು ತಿಳಿಸುತ್ತದೆ. ಹೀಗೆ ಗುರುತಿಸಿಕೊಂಡ ಪಾತ್ರವನ್ನೂ ಹಲವು ಹೆಸರುಗಳಾದ ಶಿಖಂಡಿ, ಷಂಡ, ಚಕ್ಕ, ಖೋಜ, ಅರ್ಧನಾರೀಶ್ವರ, ಜೋಗಪ್ಪ, ಹಿಜ್ರಾ, ಬೃಹನ್ನಳೆಯ ಮುಖ್ಯ ಸ್ಥಾನದ ಪ್ರಕಾರಗಳಲ್ಲಿ ಒಪ್ಪಿತವಾಗಿ ಕಂಡು ಬರುವ ನೆಲೆಯ ಸೂಕ್ಷ್ಮತೆಯನ್ನು ಆಧಾರದ ಕುರುಹುಗಳಲ್ಲಿ ಬಂಧಿಸಲಾಗಿದೆ. ಪ್ರಾಚೀನ ಗ್ರೀಸ್, ಫ್ರಿಜಿಯಾ ಮತ್ತು ರೋಮನ್ನಲ್ಲಿ ಕೆಲವು ವಿದ್ವಾಂಸರು ಟ್ರಾನ್ಸ್‌ವುಮೆನ್ ಎಂಬುವ ಗಲ್ಲಿ ಪಾದ್ರಿಗಳಿದ್ದರು ಎಂದು ಪ್ರಾಚೀನ ಮತ್ತು ಪಾಶ್ಚಾತ್ಯ ವರದಿಗಳಲ್ಲಿ ತಿಳಿಸಿದ್ದಾರೆ. ತಮ್ಮನ್ನು ತಾವು ಮಹಿಳೆಯನ್ನಾಗಿ ಅಥವಾ ಸ್ತ್ರೀ ಭಾವನೆಗಳನ್ನು ಹೊಂದಿರುವ ಪುರುಷರನ್ನಾಗಿ ಗುರುತಿಸಿಕೊಳ್ಳುವ ಅಥವಾ ಶಿಷ್ನವನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆಸಿ ಕೃತಕ ಯೋನಿ ಹೊಂದಿದ ಮಹಿಳೆಯರಿದ್ದರು. ಅಂತಹವರನ್ನು ಹಿಜ್ರಾಗಳು ಎಂದು ಕರೆಯುವುದುಂಟು ಅಥವಾ ಇವರನ್ನು ಹಿಜ್ರಾ ಸಂಸ್ಕೃತಿ ಪರಿಭಾವನೆಯಲ್ಲಿ ನೋಡಲಾಗುತ್ತದೆ ಎಂಬ ಮೂಲಗಳಿವೆ. ಹಿಜ್ರಾ ಎಂಬುದು ಅರೇಬಿಕ್ ಪದವಾಗಿದ್ದು ಇದರ ಅರ್ಥ ವಲಸೆ ಎಂಬುದಾಗಿದೆ. ತಾವು ಹುಟ್ಟಿದ ದೇಹದಿಂದ ಮಾನಸಿಕವಾಗಿ ಮತ್ತು ದೈಹಿಕವಾಗಿ ವಲಸೆ ಹೋದವರು ಅನ್ನುವ ತಾತ್ಪರ್ಯವನ್ನು ಇಲ್ಲಿ ಗಮನಿಸಬೇಕು.

ಹಿಜ್ರಾ ಎಂದರೆ ಪ್ರವಾದಿ ಮೊಹಮ್ಮದ್‌ರು ಅವರ ಅನುಯಾಯಿಗಳೊಂದಿಗೆ ಮದೀನ ನಗರಕ್ಕೆ ಕ್ರಿ.ಶ.922ರಲ್ಲಿ ವಲಸೆ ಹೋಗಿರುವುದಾಗಿ ಇಸ್ಲಾಂನಲ್ಲಿ ನಮೂದಿಸಲಾಗಿದೆ.[3] ಈ ರೀತಿಯಲ್ಲಿ ಕರೆಯಲ್ಪಡುವ ಹಿಜ್ರಾಗಳನ್ನು ಲಿಂಗ ಪರಿವರ್ತಿತಗೊಂಡ ತದನಂತರದಲ್ಲಿ ಸಮಾಜದ ಕಣ್ಣಿನಲ್ಲಿ ಹಲವಾರು ಬದಲಾವಣೆಯನ್ನೂ ಕಾಣಬಹುದಾಗಿರುತ್ತದೆ. ಲಿಂಗ ಪರಿವರ್ತಿತರೆಂದ ಮಾತ್ರಕ್ಕೆ ಒಬ್ಬ ಗಂಡಾಗಿ ಅಥವಾ ಹೆಣ್ಣಾಗಿ ಇರಬೇಕಾಗಿರುವುದು ಇಲ್ಲಾ ಅರ್ಧ, ಫಿಫ್ಟಿ ಫಿಫ್ಟಿ, ಹೆಣ್ಗ(ಹೆಣ್+ಗ. ಹೆಣ್ಣು ಮತ್ತು ಗಂಡು), ಗಂಡೆಂಗ್ಸು, ಷತ್ವ ಕಳೆದುಕೊಂಡವರು ಎಂದು ಅಪಹಾಸ್ಯಕ್ಕೆ ಗುರಿಯಾಗಿಸಿ ಅಪೂರ್ಣ ವ್ಯಕ್ತಿಗಳಾಗಿ ನಿರ್ಧರಿಸಿ ಬಿಡುತ್ತಾರೆ. ಮಡಿ, ಮೈಲಿಗೆ ನೇಮದಲ್ಲಿ ಪರಿಶುದ್ಧರು ಅನಿಸಿಕೊಂಡ ಮತಿಹೀನರು, ಸರ್ವಾಂಗವು ಸರಿ ಇದ್ದರೆ ಮನುಷ್ಯ ಪರಿಪೂರ್ಣವಾಗಲು ಸಾಧ್ಯ ಎಂದು ವಿಂಗಡಿಸಿದ್ದಾರೆ. ಹೆಣ್ಣಿನ ಪರಿಕಲ್ಪನೆ ಅಂದಾಗ ಎದೆ, ತಲೆ ಕೂದಲು, ಯೋನಿ ಇರಬೇಕು. ಗಂಡಿನ ಪರಿಕಲ್ಪನೆ ಮೀಸೆ, ಗಡ್ಡ, ಶಿಶ್ನ ಇರಬೇಕು. ಇವುಗಳ ವ್ಯತ್ಯಾಸ ಕಂಡುಬಂದಲ್ಲಿ ನಪುಂಷಕ, ಷಂಡ, ಕೋಜಾ, ಹಿಜ್ರಾ ಅನ್ನುವ ಅಸಮರ್ಥ ಮತ್ತು ಅಪೂರ್ಣ ಸ್ಥಾನಕ್ಕೆ ನಿಲ್ಲಿಸುವಲ್ಲಿ ಶತಮಾನಗಳಿಂದಲೂ ಯತ್ನಿಸುವರು. ಇಂತಹ ಹಲವಾರು ವಿಶಿಷ್ಟ ತುಚ್ಛ ಪದಗಳಿಂದ ಗುರತಿಸಲ್ಪಡುವ ಈ ವ್ಯಕ್ತಿಗಳನ್ನ ಪ್ರಸ್ತುತ ದಿನಮಾನದಲ್ಲಿ ಲೈಂಗಿಕತೆ ಅಲ್ಪಸಂಖ್ಯಾತರು ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಎಂದು ಕರೆಯಲಾಗುತ್ತಿದೆ. ಪೂರ್ಣವಾಗಿದ್ದೇವೆ ಅಂದವರಲ್ಲ ಪುಣ್ಯವಂತರಲ್ಲ. ಅಪೂರ್ಣವಾದವರೆಲ್ಲಾ ಅನಿಷ್ಟರಲ್ಲ ಅನ್ನುವ ಕಟು ಸತ್ಯವನ್ನು ಆಪ್ತವಾಗಿ ನೋಡುವ ಅಗತ್ಯವಿದೆ.

ಟ್ರಾನ್ಸ್‌ಜೆಂಡರ್ಸ್ ಎಂದು ಗುರುತಿಸಲ್ಪಟ್ಟ ವ್ಯಕ್ತಿಗಳ ಬಗೆಗೆ ಐತಿಹ್ಯಗಳನ್ನೂ ಮಧ್ಯಯುಗದಲ್ಲಿ ಯುರೋಪ್ ಸುತ್ತಲಿನ ಪ್ರದೇಶಗಳಲ್ಲಿ ದಾಖಲಿಸಿರುವುದು ಕಂಡುಬಂದಿದೆ. ಕಲೋನಿಮಸ್ ಬೆನ್ ಅವರು ಮಹಿಳೆಯ ಬದಲಿಗೆ ಪುರುಷನಾಗಿ ಹುಟ್ಟಿದ್ದಕ್ಕಾಗಿ ಲಿಂಗ ಡಿಸ್ಫೋರಿಯಾದ ಆರಂಭಿಕ ದಾಖಲೆಯಾಗಿ

---

[3] ಶಿವರಾಮಯ್ಯ. (2012). *ವೇಶ್ಯಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ನಡೆದು ಬಂದ ದಾರಿ.* ಪು. 44)

ಕಂಡುಬರುತ್ತದೆ. ಎಲೀನರ್ ರೈಕೆನರ್ ಪುರುಷ ದೇಹದ ಮಹಿಳೆಯಂತೆ ಉಡುಪು ಧರಿಸಿ ಕೆಲಸ ಮಾಡುತ್ತಿರುವುದಾಗಿ ಬ್ರಿಟನ್‌ನಲ್ಲಿ 1394ರ ಸಮಯವನ್ನು ನೋಡುವುದಾಗಿ ಕಾಣಿಸಿಕೊಂಡಿದ್ದಾರೆ. 1400ರಿಂದ ಬಾಲ್ಕನ್ಸ್‌ನಲ್ಲಿ ಹೆಣ್ಣಾಗಿ ಹುಟ್ಟಿದ ಸ್ತ್ರೀ ಕನ್ಯೆಯರು ಪುರುಷರಾಗಿ ಬದುಕಲು ಪರಿವರ್ತನೆಗೊಂಡ ವ್ಯಕ್ತಿಗಳ ಮಾಹಿತಿ ಲಭ್ಯವಾಗಿದೆ. ಇಂಡೋನೇಷ್ಯಾದಲ್ಲಿ ಟ್ರಾನ್ಸ್ ಥರ್ಡ್ ಜೆಂಡರ್‌ಗಳಿಗೆ ಅವರದೇ ಆದ ಪ್ರಾದೇಶಿಕ ವಿಭಾಗಗಳಿವೆ. ಈ ಪ್ರದೇಶಗಳಲ್ಲಿ ಸುಲವೆಸಿಯ ಬುಗ್ಗಿಗಳು ಐದು ಲಿಂಗದ ಟ್ರಾನ್ಸ್ ವ್ಯಕ್ತಿಗಳನ್ನು ಗುರುತಿಸಿದ್ದಾರೆ. ಓಶಿಯಾನದಲ್ಲಿ ಕುಕ್, ಐಲ್ಯಾಂಡ್ ಮಾವೊರಿ, ಸಮೋವಾನ್ಸ್ ಮತ್ತು ಟಾಂಗಾನ್‌ಗಳಲ್ಲಿ ಅಕವೈನ್, ಫಾಫೈನ್ ಮತ್ತು ಫಕಲೀಟಿಯಂತಹ ಟ್ರಾನ್ಸ್ ಥರ್ಡ್ ಜೆಂಡರ್‌ಗಳನ್ನೂ ಕಾಣಬಹುದಾಗಿದೆ. ಇವರ ಕುರುಹುಗಳನ್ನು ಪ್ರಾಚೀನ ಸಾಹಿತ್ಯಗಳಲ್ಲಿ ಉಲ್ಲೇಖಿಸಲಾಗಿದೆ.

**ಮಹಾಕಾವ್ಯ ಕಥಾವೃತ್ತಾಂತಗಳು**

ಚಾರಿತ್ರಿಕ ಹಿನ್ನೆಲೆಯಲ್ಲಿ ಕಾವ್ಯ ಕಲ್ಪನೆ ಪರಿಶೀಲಿಸಿದರೆ ಲಿಂಗತ್ವ ಅಲ್ಪಸಂಖ್ಯಾತರ ಇತಿಹಾಸ ಮಹಾಭಾರತದ ಕಾಲಕ್ಕೆ ಹೋಗುತ್ತದೆ. ಇಲ್ಲಿ ಶಿಖಂಡಿಯ ಪ್ರಸಂಗ ಅವಲೋಕಿಸಬಹುದಾಗಿದೆ. ಈತ ಪಾಂಚಾಲ ರಾಜನಾದ ಧೃಪದನ ಹಿರಿಯ ಮಗ. ಶಿಖಂಡಿ ಹೆಣ್ಣಾಗಿ ಜನಿಸಿ ಗಂಡಾದವನು (ಎಫ್.ಟು.ಎಮ್) ಇವನು ದಶಾರ್ಣ ದೇಶಾಧಿಪತಿಯಾದ ಹಿರನ್ಯವರ್ಮನ ಮಗಳನ್ನು ಮದುವೆಯಾದ. ಇವನಿಗೆ ಕ್ಷೇತ್ರದೇವ ಋಕ್ಷದೇವರೆಂಬುದಾಗಿ ಇಬ್ಬರು ಪುತ್ರರರು ಇದ್ದರು. ಮಹಾ ಭಾರತ ಯುದ್ಧದ ಹತ್ತನೇಯ ದಿನ ಇವನು ಭೀಷ್ಮರನ್ನು ಎದುರಿಸಿದ್ದು, ಭೀಷ್ಮರು "ಶಿಖಂಡಿಯಲ್ಲಿ ಇರುವ ಸ್ತ್ರೀತ್ವದಿಂದಾಗಿ ಸಂಗ್ರಾಮ ಮಾಡಲು ನಾನು ಇಚ್ಛಿಸುತ್ತಿಲ್ಲ ನಪುಂಸಕರಲ್ಲಿ ಕಾಳಗವು ಸಲ್ಲದು"[4] ಎಂದು ಶಸ್ತ್ರ ಸನ್ಯಾಸಮಾಡಿದ್ದರು. ನಂತರ 16ನೆಯ ದಿನ ಶಿಖಂಡಿ ಕೃತವರ್ಮನಿಂದ ಸೋತ ಕಥಾವೃತ್ತಾಂತವನ್ನು, ಯುದ್ಧದ ಭೂಮಿಯಲ್ಲಿ ಸರಿಸಾಟಿಯಾಗಿ ನಿಲ್ಲಬಲ್ಲ ಆತ್ಮಸ್ಥೈರ್ಯ ಇತ್ತೆನ್ನುವ ಗಹಣೆಗೆ ಸೆರೆಯಿಡಿಯಬಹುದಾಗಿದೆ.

ಶಿಖಂಡಿಯ ಪಾತ್ರದ ಪೂರ್ವ ವೃತ್ತಾಂತವನ್ನು ಅವಲೋಕಿಸಿದಾಗ ಅಂಬೆ, ಅಂಬಿಕೆ, ಅಂಬಾಲಿಕೆಯರು ಕಾಶಿರಾಜನ ಮಕ್ಕಳು. ಕಾಶೀರಾಜನು ಈ ಮೂವರಿಗೂ ಸ್ವಯಂವರವನ್ನು ಏರ್ಪಡಿಸಿದ. ಭೀಷ್ಮನು ಈ ಮೂವರನ್ನು ವರಿಸುವುದಾಗಿ ಅಪಹರಿಸಿದ. ಆಗ ಅಂಬೆ ಸಾಳ್ವ ರಾಜನನ್ನು ವಿವಾಹಿಸಲು ಇಚ್ಚಿಸಿದಾಗ ಭೀಷ್ಮನು ಅವಳನ್ನು ಸಾಳ್ವ ರಾಜನ ಬಳಿ ಬೀಳ್ಕೊಡುವನು. ಇವಳನ್ನು ಅಪಹರಿಸಿದ ಎನ್ನುವ ಸಂಶಯದಲ್ಲಿ ಸಾಳ್ವ ರಾಜನು ಇವಳನ್ನು ತಿರಸ್ಕರಿಸುತ್ತಾನೆ. ಬಳಿಕ ಇವಳು ಭೀಷ್ಮನಲ್ಲಿಗೆ ತನ್ನನ್ನು ಮದುವೆಯಾಗುವಂತೆ ಭಿನ್ನೈಸಿದಾಗ ಅದೂ ವ್ಯರ್ಥವಾಗಲು, ಪರಶು ರಾಮನನ್ನು ಮೊರೆಹೊಕ್ಕು, ಅವನಿಂದ ಭೀಷ್ಮನಿಗೆ ಹೇಳಿಸಿದಳು. ತನ್ನ ಪ್ರಯತ್ನ ಭೀಷ್ಮನಲ್ಲಿ ಸಫಲವಾಗದೆ ಕುಪಿತಗೊಂಡ ಅಂಬೆ ಇವನನ್ನು ಕೊಲ್ಲುವ ಸಲುವಾಗಿ ಶಿವನನ್ನು ಕೇಂದ್ರಿಸಿ ತಪಸ್ಸು ಮಾಡಿ ಶಿಖಂಡಿಯೆಂಬ ಹೆಸರಿನಿಂದ ಧೃಪದ ರಾಜನ ಮಗನಾಗಿ ಜನಿಸಿದಳು. ಬೆಳೆದು ಮುಂದೆ ಶಿಖಂಡಿಯಾಗಿ ಕುರುಕ್ಷೇತ್ರ ಯುದ್ಧದಲ್ಲಿ ಭೀಷ್ಮನ ಮುಖಾಮುಖಿಯಾದಾಗ ಹೆಣ್ಣನ್ನು ವಧಿಸಲಾರೆ ಎಂದು ಶಸ್ತ್ರತ್ಯಾಗ ಮಾಡಿದ್ದ ಎಂಬುದು ಕಂಡುಬರುತ್ತದೆ.

---

[4] ಅನಂತರಾಮ ರಾವ್ ಕೆ. (2013). *ಸಂಪೂರ್ಣ ಮಹಾಭಾರತ (ಹದಿನೆಂಟು ಪರ್ವಗಳು).* ಪು.521

ಮತ್ತೊಂದು ವೃತ್ತಾಂತದ ಪ್ರಕಾರ ಊರ್ವಶಿಯ ಶಾಪ ಪ್ರಸಂಗ. ಮಹಾಭಾರತದ ಲೈಂಗಿಕ ರಾಜಕಾರಣದ ಮತ್ತೊಂದು ಮುಖ, ಗಂಡು ಹೆಣ್ಣಾದ ಕಥೆ. ಒಲಿದು ಬಂದ ದೇವ ಸೂಳೆ(ದೇವ ಪ್ರಾಂಗಣದ ಲೈಂಗಿಕ ಸೇವಕಿ)ಯಾದ ಊರ್ವಶಿಯನ್ನು ಅರ್ಜುನ ಕಾಮಿಸದೆ ತಾಯಿ ಭಾವದಲ್ಲಿ ನೋಡುತ್ತಾನೆ. ವ್ಯಾಮೋಹದ ಹಾವಕ್ಕೇ ಅವಮಾನಿತಳಾಗಿ ಕೋಪ ಬರದಿಂದ ಅರ್ಜುನನಿಗೆ ನಪುಂಸಕನಾಗಿ ಹುಟ್ಟು ಎಂದು ಶಪಿಸಿದಳು. ಇಂದ್ರನ ಮಧ್ಯಸ್ಥಿಕೆಯಿಂದ ಆ ಶಿಖಂಡಿತ್ವವನ್ನು ಒಂದು ವರ್ಷಕ್ಕೆ ಕಡಿಮೆಗೊಳಿಸಿ ಅಭಿಶಾಪ ನೀಡುವಳು. ಅರ್ಜುನನು ಮಹಾಪ್ರಸಾದವೆಂದು ಸ್ವೀಕರಿಸಿ ಇದರ ಫಲವಾಗಿ ಅಜ್ಞಾತವಾಸದ ಸಂದರ್ಭದಲ್ಲಿ ಅನುಕೂಲವಾಯಿತು. ವಿರಾಟನ ರಾಜನ ಅಂತಃಪುರದಲ್ಲಿ ಅವನ ಮಗಳು ಉತ್ತರೆಗೆ, ಪರಿವರ್ತನ ಸ್ತ್ರೀ(ಎಮ್.ಟು.ಎಫ್.)ಯಾದ ಬೃಹನ್ನಳೆ ಎಂಬ  ಹೆಸರಿನ ನಾಟ್ಯಾ ಗುರುಗಳಾಗಿ ಕೀರ್ತಿಗಳಿಸುವಳು. ಅಂತೂ ಈ ಶಿಖಂಡಿ ಸಂಬಂಧವಾದ ಲೈಂಗಿಕತೆ ರಾಜಕಾರಣ ಮಹಾಭಾರತದಲ್ಲಿ ಧ್ವನಿಪೂರ್ಣವಾಗಿದೆ. ಭೀಷ್ಮನು ಶಿಖಂಡಿಯೊಂದಿಗೆ ಯುದ್ಧ ಮಾಡಲಾರೆ ಎಂಬ ನಿರ್ಧಾರದಲ್ಲಿ ಪೌರಾಣಿಕ ಮುಸುಕು ಸರಿಸಿ ನೋಡಿದರೆ ಲೈಂಗಿಕತೆ ಅಹಮಿಕೆ ಕಂಡುಬರುತ್ತದೆ. ಆಕೆ ಸಮರ್ಥಳೆ ಇದ್ದರೂ, ಶಿಖಂಡಿಯೊಬ್ಬಳು ಗಂಡಿನೊಡನೆ ಯುದ್ಧ ಮಾಡಲು ಅನರ್ಹಳು ಎಂಬುದು ಪುರುಷ ಮೇಲ್ಮೈಯೆ ಎದ್ದು ಕಾಣುತ್ತದೆ.

ಸಲಿಂಗ ಸಂಬಂಧ ಎಂಬುದು ಪುರಾತನ ಭಾರತೀಯ ನಾಗರಿಕತೆಯ ಭಾಗವಾಗಿತ್ತು. ಎಂಬುದಕ್ಕೆ ಧಾರ್ಮಿಕ ಮತ್ತು ಐತಿಐಹಾಸಿಕ ಪಠ್ಯ ಮತ್ತು ಕಲಾಕೃತಿಗಳಲ್ಲಿ ಸಾಕ್ಷ್ಯ ಸಿಗುತ್ತವೆ. ಜೊತೆಗೆ ವೇದಗಳ ಕಾಲ ಋಗ್ವೇದದಲ್ಲಿ ಅಗ್ನಿದೇವನನ್ನು ಹಲವು ಬಾರಿ ದ್ವಿಮಾತ್ರಿ ಎಂದು ಉಲ್ಲೇಖಿಸಲಾಗಿದೆ. ಕ್ರಿಸ್ತ ಶಕ 11ನೇ ಶತಮಾನದಲ್ಲಿ ಸೋಮದತ್ತ ಭಟ್ಟ ರಚಿಸಿದ ಕಥಾಸರಿತ್ಸಾಗರ ಕಾವ್ಯದಲ್ಲಿ ಸೋಮಪ್ರಭಾಳು ಕಳಿಂಗಸೇನನ್ನು ಹಿಂದಿನ ಜನ್ಮದಿಂದಲೂ (ಪುರುಷನಾಗಿದ್ದಾಗ) ಪ್ರೀತಿಸುತ್ತಿದ್ದೆ ಎಂದು ಹೇಳುತ್ತಾಳೆ. ಹಿಂದೂ ಪುರಾಣಗಳಲ್ಲಿ ಇಂತಹ ಹಲವು ಉಲ್ಲೇಖಗಳು ಇವೆ. ಸೂಫಿ ಪರಂಪರೆಯಲ್ಲೂ ಇಂತಹ ಉಲ್ಲೇಖಗಳಿವೆ.[5] ಎಂದು ಸುಪ್ರೀಂ ನ್ಯಾಯಾಲಯದ ನ್ಯಾಯಮೂರ್ತಿ ಎಸ್.ಕೆ.ಕೌಲ್ ಅವರು ತಮ್ಮ ತೀರ್ಪಿನಲ್ಲಿ ವಿವರವಾಗಿ ಬರೆದಿದ್ದಾರೆ. ಇದೇ ಮಾದರಿಯಲ್ಲಿಯೇ 12ನೇ ಶತಮಾನ ಕಾಲದಲ್ಲಿನ ವಚನ ಸಾಹಿತ್ಯವು ಲಿಂಗ ಸಮಾನತೆಗಾಗಿ ಮಿಡಿದಿರುವುದು ಕಂಡುಬಂದಿದೆ.

**ವಚನ ಸಾಹಿತ್ಯಗಳು**

ಹನ್ನೆರಡನೆ ಶತಮಾನದಲ್ಲಿ ಸಮಾಜದ ಸಾಮರಸ್ಯ, ಲಿಂಗತ್ವದ ಬಗೆಗಿನ ಸಮಾನತೆ, ಸಾಮಾಜಿಕ ಕ್ರಾಂತಿಯ ಸಮರಸ, ಅವಿಭಾ೯ವಿತಗೊಂಡ ಲೈಂಗಿಕತೆ ಕೂಗು ಶಿವ ಶರಣ, ಶರಣೇಯರ ವಚನಗಳು ಸಂಕೇತವಾಗಿಡುತ್ತದೆ. ವಚನ ಸಾಹಿತ್ಯ ಧಾರ್ಮಿಕ ಚಳುವಳಿಯಾಗಿ ಬಂದಿದ್ದು ಜಾತಿ, ವರ್ಗ, ಲಿಂಗ ಮತ್ತು ಮಾನವ ಅಸ್ಮಿತೆಯ ಹಕ್ಕುಗಳ ಕುರಿತ ಚರ್ಚೆಗೆ ಅದು ಹೆಚ್ಚು ಒತ್ತನ್ನು ನೀಡಿದೆ. ಜಾತಿ ಲಿಂಗ ಮತ್ತು ಪಿತೃ ಪ್ರಧಾನತೆಯ ಸಂಕೀರ್ಣವಾದ ಸಂಯೋಜನೆಯಲ್ಲಿ ಸ್ತ್ರೀ ಸ್ವರೂಪವನ್ನು ವಚನಗಳಲ್ಲೂ ಕಾಣಲು ಸಾಧ್ಯವಾಗುತ್ತದೆ. ಹೆಣ್ಣು ಗಂಡು ಎನ್ನುವ ಭೇದ ತೊಲಗಲು ಉಭಯ ಜ್ಞಾನಿಗಳಾಗಿ ಕಂಡು ಬರುವ

[5] ಆಳ–ಅಗಲ (2023, ಅಕ್ಟೋಬರ್ 21). ಪ್ರಜಾವಾಣಿ ದಿನ ಪತ್ರಿಕೆ. ಪು.5

ಶಿವಶರಣೆ ಗೊಗ್ಗವ್ವೆ ಪರಿಪೂರ್ಣತೆಯನ್ನು ಕಂಡುಕೊಳ್ಳಲು 'ಲಿಂಗತ್ವದ ಜ್ಞಾನ'ದ ಬಗ್ಗೆ ಪ್ರಶ್ನಿಸಿ ಹೆಣ್ಣು, ಗಂಡು ಎಂಬುದಾಗಿ ಸೀಳಿ ನೋಡುವ ದೃಷ್ಟಿಯನ್ನ ಪ್ರಶ್ನಿಸುತ್ತಾರೆ.

ಮೊಲೆ ಮೂಡಿ ಬಂದಡೆ ಹೆಣ್ಣೆಂಬರು

ಮೀಸೆಕಾಸೆ ಬಂದಡೆ ಗಂಡೆಂಬರು

ಈ ಉಭಯದ ಜ್ಞಾನ

ಹೆಣ್ಣೋ ಗಂಡೊ ನಾಸ್ತಿನಾಥಾ?

ಗೊಗ್ಗವ್ವೆ ಹೇಳುವುದು ಜ್ಞಾನಕ್ಕೆ ಲಿಂಗವಿಲ್ಲ. ಲಿಂಗತೀತಾ ವಿಷಯ ಎಂಬುದು ಇವರ ನಿಲುವು. ಲಿಂಗತ್ವದ ಭಿನ್ನತೆ ಅಳಿದಾಗ ಮಾತ್ರ ಪರಿಪೂರ್ಣತೆ ಸಾಧ್ಯ ಎಂಬುದಾಗಿ ಶಿವಶರಣೆ ವಚನದಲ್ಲಿ ಪ್ರಸ್ಥಾಪಿಸಿದ್ದಾರೆ. ಲಿಂಗತ್ವ ಭಿನ್ನತೆ ಕಳಚಿದಾಗ ಲಿಂಗತ್ವ ಅಲ್ಪಸಂಖ್ಯಾತರು ಮನುಷ್ಯರಷ್ಟೆ, ಇವರು ವಿಭಿನ್ನರಲ್ಲ ಎಂಬ ತಾರತಮ್ಯ ನಶಿಸುತ್ತದೆ. ಜಾತಿ ಮತ್ತು ಲಿಂಗ ಕಾರಣವಾಗಿ ಮಹಿಳೆ ಅಸಮತ್ವದ ಭಾಗವಾಗುತ್ತಾಳೆ. ಇಂತಹ ಸ್ಥಿತಿ ತಿಳಿದು ಬಂದರೂ ಸಹ ಲಿಂಗತ್ವ ಅಲ್ಪಸಂಖ್ಯಾತರ ಅಂತರ್ ಮಿಡಿತ ಹೆಣ್ಣಾಗುತ್ತದೆ. ವಚನದಲ್ಲಿ 'ಲಿಂಗ ಪತಿ ಶರಣ ಸತಿ' ಎಂದು ಬೆಸೆಯುವಲ್ಲಿ ಸಮತ್ವತೆಯನ್ನು ಕಂಡರೆ ಗಂಡು–ಹೆಣ್ಣು ಒಂದಾಗಿ ನೋಡುವ ಕ್ರಮದಲ್ಲಿ ಒಂದು ಜೀವ ಎರಡು ಭಾವವನ್ನು ಅಂತಃಕರಿಸಿಕೊಂಡಿರುವ ಲಿಂಗತ್ವ ಅಲ್ಪಸಂಖ್ಯಾತರನ್ನು ಸತಿ–ಪತಿ ಎಲ್ಲವೂ ಇವರೆ ಎಂದು ಹೇಳುವುದರಲ್ಲಿ ಅತಿಶಯೋಕ್ತಿಯೇನಿಲ್ಲ. ಸತಿ–ಪತಿ, ಗಂಡು–ಹೆಣ್ಣು ಸಮತ್ವತೆಯ ಸಾಮ್ಯತೆಯ ಮಹತ್ವವನ್ನ ಶರಣರ ಕಾಲಮಾನದಲ್ಲಿ ಗುರುತಿಸಬಹುದು. ಜೊತೆಗೆ ಅರ್ಧನಾರೀಶ್ವರ ಕಲ್ಪನೆಯಲ್ಲಿ ಇವರು ಶಿವ ಸ್ವರೂಪಿಗಳಾಗಿಬಿಡುತ್ತಾರೆ. ಶರಣೆಯಾದ ನೀಲಮ್ಮನ ವಚನದಲ್ಲಿ 'ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ ಪುಣ್ಯವಿಲ್ಲದ ಪಾಪಿಯ?' ಎಂಬುದು ಪಿತೃತ್ವದ ಒತ್ತಡಗಳು ಮಹಿಳೆಯ ಹುಟ್ಟನ್ನು ಸ್ವೀಕರಿಸುವುದು ಪಾಪಗ್ರಸ್ತವಾಗಿ ಭಾಸವಾಗುತ್ತದೆ. ಇಂತಹ ಸರ್ವ ಸಂಪನ್ನೆಯಾಗಿ ಮಹಿಳೆಯಾಗಿ ಜನ್ಮವೆತ್ತವಳೆ ಸಂಕಷ್ಟ ಅನುಭವಿಸುವುದಾದರೆ, ಗಂಡಾಗಿ ಹುಟ್ಟಿ ಹೆಣ್ಣು ಎಂದು ಪರಿಭಾವಿಸಿ ಬದಲಾದ ಪುಂಸ್ತ್ರೀಯರನ್ನು ಸಮಾಜ ಪ್ರಸ್ತುತ ಹೇಗೆ ಒಪ್ಪಿಕೊಳ್ಳುತ್ತದೆ. ಎಂಬುದು ಗಂಭೀರವಾಗಿ ಸ್ತ್ರೀತ್ವದ ಅಸ್ಮಿತೆಯನ್ನ ಗುರುತಿಸುವಲ್ಲಿ ವಿಫಲವಾಗಿರುವುದು ವಿಷಾದನೀಯ. ಇದೇ ಮಾದರಿಯಲ್ಲಿ ಸಾಹಿತ್ಯದ ಮತ್ತೊಂದು ಘಟ್ಟವಾದ ಜನಪದ ಸಾಹಿತ್ಯವು ಪ್ರಮುಖವಾಗಿದ್ದು, ಲಿಂಗತ್ವ ಅಲ್ಪಸಂಖ್ಯಾತರ ಐತಿಹ್ಯಗಳನ್ನು ಗುರುತಿಸಬಹುದಾಗಿದೆ.

**ಜಾನಪದೀಯ ಸಾಹಿತ್ಯ**

ಜನಪದ ಸಾಹಿತ್ಯವು ಅನಕ್ಷರಸ್ಥರ ಕೈಗೂಸಾಗಿದೆ. ಲಿಂಗತ್ವ ಅಲ್ಪಸಂಖ್ಯಾತ ವರ್ಗದವರನ್ನು ಅತ್ತ ಹೆಣ್ಣೂ ಅಲ್ಲದ ಇತ್ತ ಗಂಡು ಅಲ್ಲದ ಸ್ಥಿತಿ, ಹೆಣ್ಣಿನ ಉಡಿಗೆ ತೊಡಿಗೆ ಧರಿಸಿ ಹೆಣ್ಣಿನಂತೆ ಅಲಂಕರಿಸಿಕೊಂಡುರೂ ಗಂಡಿನಂತೆ ಧ್ವನಿ, ಗಡ್ಡ ಮೀಸೆಯುಳ್ಳವರು, ನಪುಂಸಕ, ಷಂಡ, ಕೋಜ, ಕೊಜ್ಜ, ಕೊಜ್ಜಲ, ಮಹಲ, ಬೀಜ ತೆಗೆದ ಗಂಡಸು, ನಿಷ್ಕ್ರಿಯಗೊಂಡವ ಮುಂತಾದ ಪರ್ಯಾಯ ಪದಗಳಲ್ಲಿ ಬಾಯಿಂದ ಬಾಯಿಗೆ, ಜನರಿಂದ ಜನರಿಗೆ ಜಾನಪದದ ಅಭಿಪ್ಸೆಗಳು ಬಳುವಳಿಯಾಗಿ ಬಂದಿದೆ. ಕೆಲವು ಮುಖ್ಯ ಭಾಗಗಳಲ್ಲಿ ಪ್ರಾದೇಶಿಕವಾಗಿ ನೋಡುವುದಾದರೆ ಉತ್ತರ ಕರ್ನಾಟಕ 'ಚಕ್ಕಾ', ಮಹಾರಾಷ್ಟ್ರ 'ಮುಂಬಯಿ', ಬಾಗಲಕೋಟೆ 'ಕಲಾದಗಿ',

ಸವದತ್ತಿ–ಬೆಳಗಾವಿ 'ಗಂಡು ಜೋಗಪ್ಪ', ಆಂಧ್ರ 'ಹೈದರಾಬಾದಿ', ಬೆಂಗಳೂರು 'ಚನ್ನಪಟ್ಟಣ', ಮೈಸೂರು–ಚಾಮರಾಜನಗರ 'ಹೆಣ್ಣಿಗ' ಎಂಬ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಏಷ್ಯಾದ ಭಾರತ, ಬಾಂಗ್ಲ ದೇಶ, ಪಾಕಿಸ್ತಾನ, ಶ್ರೀಲಂಕಾ ಮತ್ತು ಚೀನಾಗಳಲ್ಲಿ ಇವರು ಹೆಚ್ಚಾಗಿ ಕಂಡು ಬರುತ್ತಾರೆ. ಚೀನಾದಲ್ಲಿ ಹಿಜಡಗಳು 9ನೇ ಶತಮಾನದಲ್ಲಿಯೇ ಇದ್ದರು ಎಂದು ತಿಳಿದು ಬರುತ್ತದೆ. ರಾಜ ಮಹಾರಾಜರ ಅರಮನೆಗಳಲ್ಲಿ ಪುರುಷರ ಗಂಡಸುತನ ಅಥವಾ ಬೀಜ ತೆಗೆದು ಷಂಡರನ್ನಾಗಿ ಮಾಡಿ ರಾಣಿಯರ ಅರಮನೆಗಳಲ್ಲಿ ಅವರ ಸೇವೆ, ಅಲಂಕಾರ, ಶೃಂಗಾರ ಮಾಡಲು ಇಟ್ಟುಕೊಳ್ಳುತ್ತಿದ್ದರು.[6] ಚೀನಾದ ಮಿಂಗ್ ಅರಸನ ಕಾಲದಲ್ಲಿ 70000 ಹಿಜಡಗಳು ಇದ್ದರೆಂದು 1930ರಲ್ಲಿ ಅಮೇರಿಕಾದ ಪತ್ರಿಕೋದ್ಯಮಿ ವಿನ್ಸೆಂಟ್ ಸ್ಟಾರೇಟ್ ಬೀಜಿಂಗ್‌ನಲ್ಲಿ ಅಧ್ಯಯನ ನಡೆಸಿ ಬರೆದಿದ್ದಾರೆ. ಹೀಗೆ ಐತಿಹ್ಯಗಳನ್ನು ಹೊಂದಿರುವ ಮಂಗಳ ಮುಖಿಯರುಗಳು ಪ್ರಾದೇಶಿಕವಾಗಿ ತಮ್ಮದೇ ಆದ ಚಲನವಲನಗಳಿಂದ ಗುರುತಿಸಿಕೊಂಡು ಸಮಾಜದಲ್ಲಿ ಬದುಕು ನಡೆಸುತ್ತಿದ್ದಾರೆ.

ಯಾವುದೇ ವ್ಯಕ್ತಿಗೆ 12 ರಿಂದ 15ನೇ ವಯಸ್ಸಿನ ಹದಿಹರೆಯದ ಹಂತದಲ್ಲಿ ತಮ್ಮ ದೈಹಿಕ ವ್ಯಕ್ತಿತ್ವ ಬದಲಾವಣೆ ಸಹಜವಾಗಿ ಕಂಡುಬರುತ್ತದೆ. ಹಾಗೆ ಇವರಲ್ಲಿ ದೈಹಿಕ ಬದಲಾವಣೆಗಳಲ್ಲಿ ಕೂದಲು, ಧ್ವನಿಯಲ್ಲಿ ಮೆಲು ಗಡಸುತನ ಜೊತೆಗೆ ಹೆಣ್ಣಿನ ಲಕ್ಷಣಗಳು ಕಾಣಿಸಿಕೊಳ್ಳುವುವು. ಇಂತಹ ಬದಲಾದ ವ್ಯಕ್ತಿಗಳು ತಮ್ಮವರನ್ನೆ ಹುಡುಕಿ ಅರಸುತ್ತಾ ಅವರೊಡನೆ ಸೇರುವರು. ಉತ್ತರ ಭಾರತದ ಕೆಲವೆಡೆ ಮಾರ್ವಾಡಿಗಳಲ್ಲಿ ಮಂಗಳಮುಖಿಯರಿಗೆ ಗೌರವದ ಸ್ಥಾನವಿದೆ. ಅವರನ್ನು ಶಕ್ತಿ ದೇವತೆಯರೆಂದು ನಂಬುತ್ತಾರೆ. ಮನೆಯಲ್ಲಿ ಮಗು ಹುಟ್ಟಿದರೆ ನಾಮಕರಣದಲ್ಲಿ ಅವರ ಕೈಯಲ್ಲಿ ಮಗುವನ್ನು ಕೊಟ್ಟು ಆಶೀರ್ವದಿಸುವಂತೆ ಹೇಳುವರು. ಗೃಹ ಪ್ರವೇಶ ಮದುವೆ ಇನ್ನೂ ಹಲವಾರು ಸಂದರ್ಭಗಳಲ್ಲಿ ಮಂಗಳಮುಖಿಯರನ್ನು ಕರೆಯಿಸಿ ಹಾಡಿಸಿ ನೃತ್ಯ ಮಾಡಿಸುವರು. ಅವರಿಗೆ ಹಣ ನೀಡಿ ಆಶೀರ್ವದಿಸುವಂತೆ ಕೇಳುವರು. ಅವರನ್ನು ಪಾರ್ವತಿಯ ಅವತಾರವೆಂದು, ಅರ್ಧನಾರೀಶ್ವರರೆಂದು, ಚಂದೀಗಢದಲ್ಲಿರುವ ಮುರ್ಗಾದೇವಿಯ ಅನುಯಾಯಿಗಳೆಂದು ನಂಬುತ್ತಾರೆ. ಮುಂಬಯಿ ಭಾಗದ ಮಂಗಳಮುಖಿಯರಿಗೆ ಅಜ್ಮೀರದ ದರ್ಗಾ ಪವಿತ್ರ ಯಾತ್ರಾ ಸ್ಥಳ. ಹೋಳಿ ಮತ್ತು ದೀಪಾವಳಿ ಹಬ್ಬಗಳನ್ನು ಇವರು ವಿಶೇಷವಾಗಿ ಆಚರಿಸುತ್ತಾರೆ. ತಮಿಳುನಾಡಿನ ನಾಗೋರ್ ಸಮೀಪ ಕೂವಗಂ ಎಂಬ ಹಳ್ಳಿಯ 'ಕುತ್ತಾಂಡಮ್ ದೇವಾಲಯ'ದಲ್ಲಿ ಏಪ್ರಿಲ್ ಕೊನೆಯಲ್ಲಿ ದೇಶದ ಎಲ್ಲಾ ಲೈಂಗಿಕತೆ ಮತ್ತು ಲಿಂಗತ್ವ ಅಲ್ಪಸಂಖ್ಯಾತರು ಸೇರುತ್ತಾರೆ. ಆ ದಿನ ರಾತ್ರಿ ದೇವಾಲಯದ ಅರ್ಚಕನನ್ನು ಮದುವೆ ಮಾಡಿಕೊಂಡು ಇಡೀ ರಾತ್ರಿ ಸಡಗರ ಸಂಭ್ರಮದಿಂದಿರುವರು. ಮರುದಿನ ಬಳೆ ಒಡೆದುಕೊಂಡು ವಿಧವೆ ಎಂದು ಅಳುತ್ತಾ ಗೋಳಾಡುವರು. ಹೀಗೆ ಮುಕ್ತಾಯವಾಗುವ ಜಾತ್ರೆ ಕೂವಗಂ ಸಮೀಪದ ವಾಣಿಯಂಬಾಡಿ ಎಂಬ ಪ್ರದೇಶವು ಇವರ ಚಟುವಟಿಕೆಗಳ ಕೇಂದ್ರವಾಗಿದೆ.

ಕರ್ನಾಟಕದ ಬೆಳಗಾವಿಯ ಸವದತ್ತಿ ಎಲ್ಲಮ್ಮದೇವಿ ಗುಡ್ಡದಲ್ಲಿ ಹಿಜಡಗಳನ್ನು 'ಗಂಡುಜೋಗಪ್ಪ' ಎಂದು ಕರೆಯುತ್ತಾರೆ. 'ಜೋಗ' ಎಂದರೆ ಆತ್ಮ ಪರಮಾತ್ಮ ಸಂಬಂಧ. ಇಂಥವರು ಹೆಣ್ಣಾದರೆ 'ಜೋಗತಿ'

---

[6] ಅರವಿಂದ ಮಾಲಗತ್ತಿ. (ಸಂ.) (2006). *ವಿಷಯ ವಿಶ್ವಕೋಶ (ಜಾನಪದ).* ಮೈಸೂರು ವಿಶ್ವವಿದ್ಯಾಲಯ. ಪು. 414

ಎಂದೂ ಗಂಡಿದ್ದರೆ 'ಜೋಗಪ್ಪ' ಎಂದೂ ಕರೆಯುವರು ಜೋಗತಿ ಬಳೆ, ಸೀರೆ, ಜೋಗಪ್ಪ ಬಳೆ, ನಿಲುವಂಗಿ ಧರಿಸಿ ಕವಡೆಸರ ಧರಿಸಬೇಕು. ಆದರೆ ಗಂಡು ಜೋಗಪ್ಪಗಳು ಬಣ್ಣದ ಸೀರೆ, ಕುಪ್ಪಸ ತೊಟ್ಟು ಹೆಣ್ಣಿನ ಅಲಂಕಾರ ಮಾಡಿಕೊಳ್ಳುವರು. ಇವರು ತಮ್ಮನ್ನೂ ಯಾರೂ ಹಿಜಡ ಅಥವಾ ಚೆಕ್ಕಾ ಎಂದು ಹೇಳಿಕೊಳ್ಳುವುದಿಲ್ಲ. ದೇವಿ ನಮ್ಮನ್ನು ಈ ರೀತಿ ಮಾಡಿದ್ದಾಳೆ ಎಂದು ಭಾವಿಸುವ ಮೂಲಕ ಸಮಾಜದಲ್ಲಿ ಧಾರ್ಮಿಕ ಹಿನ್ನೆಲೆ ಪಡೆಯುತ್ತದೆ. ಹೀಗೆ ಧಾರ್ಮಿಕ ಹಿನ್ನೆಲೆಯಾದಿಯಾಗಿ ಗುರುತಿಸಿಕೊಂಡ ಲಿಂಗತ್ವ ಅಲ್ಪಸಂಖ್ಯಾತರು ವೈಜ್ಞಾನಿಕ ಚಿಂತನೆಯೆಡೆಗೆ ಸಾಗುವತ್ತಾ ಸುಂದರ ಬದುಕು ಕಟ್ಟಿಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ರಂಗಗಳಲ್ಲಿಯೂ ಭಾಗವಹಿಸುವಿಕೆ ಅಗತ್ಯವಿದೆ. ಇದರ ಬಗ್ಗೆ ಆಶಕ್ತಿವಹಿಸಿ ಪ್ರಸ್ತುತ ವಿದ್ಯಾಮಾನವು ಸಾಂಸ್ಕೃತಿಕ ಚೌಕಟ್ಟನ್ನು ಹಾಕಿಕೊಟ್ಟಿದೆ. ಜೊತೆಗೆ ಅಂಕಿ ಸಂಖ್ಯೆಗಳಾಧಾರಿತವಾಗಿ ಗುರುತಿಸಿ ಸರ್ಕಾರದ ಯೋಜನೆಗಳನ್ನು ಇವರಿಗೆ ತಲುಪಿಸುವಲ್ಲಿ ಪ್ರಸ್ತುತ ವಿದ್ಯಾಮಾನವು ಸಹಕಾರಿಯಾಗಿದೆ.

**ಪ್ರಸ್ತುತ ಕಾಲಮಾನ**

ಜಗತ್ತಿನಾದ್ಯಂತ ಟ್ರಾನ್ಸ್‌ಜೆಂಡರ್ಸ್ ವ್ಯಕ್ತಿಗಳು ದ್ವಂದ್ವಾತ್ಮಕ ದೇಹದಲ್ಲಿ ಸಿಕ್ಕಿಬಿದ್ದಿದ್ದಾರೆ ಎಂದು ಭಾವಿಸಿಕೊಳ್ಳುವರು. ತಮ್ಮಲ್ಲಿ ಏನಾದರೂ ತಪ್ಪಾಗಿದಿಯೋ ಎಂಬ ಭಾವನೆ ನಿರೂಪಿಸುವ ಹಾಗೆ ಉದ್ಯೋಗ, ಮನೆ, ಶಾಲೆ ಹಾಗೂ ದೈನಂದಿನ ಜೀವನ ಹೀಗೆ ಸರ್ವತ್ರ ಎಲ್.ಜಿ.ಬಿ.ಟಿ.ಐ.ಕ್ಯೂ (ಲೆಸ್ಬಿಯನ್, ಗೇ, ಬೈಸೆಕ್ಷುವಲ್, ಟ್ರಾನ್ಸ್ ಜೆಂಡರ್, ಇಂಟರ್ ಸೆಕ್ಸ್, ಕ್ವೀರ್) ಸಮುದಾಯದವರು ಇನ್ನೂ ಸಹ ವ್ಯಾಪಕ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ. ಸಮಾಜವು ಗೊಂದಲ ಮತ್ತು ಅನಾಯಕತ್ವದಲ್ಲಿ ಇವರನ್ನು ಕಟ್ಟಕಡೆಯ ವ್ಯಕ್ತಿಗಳಾಗಿ ಕಾನೂನಿನ ಮೂಲೆ ಗುಂಪಾಗಿ ಸರಿಸಲಾಗಿತ್ತು. ಆದರೆ ಪ್ರತಿಯೊಬ್ಬ ಅಲಕ್ಷಿತ ಸಮುದಾಯದವನ್ನು ಸಮಾಜದ ಮುನ್ನೆಲೆಗೆ ತರುವ ಪ್ರಯತ್ನವು ಡಾ.ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ಕಾಣಬಹುದು. 'ಈ ದೇಶದಲ್ಲಿ ಅನೇಕಾನೇಕ ಸಮುದಾಯಗಳಿಗೆ ಸೇರಿದ ಜನರು ವಾಸಮಾಡುತ್ತಿದ್ದಾರೆ, ಪ್ರತಿಯೊಂದು ಸಮುದಾಯಕ್ಕೂ ಅದರದ್ದೇ ವಿಶೀಷ್ಟವಾದ ಕಾನೂನುಗಳು ಇವೆ. ಸರಕಾರವು ಧರ್ಮನಿರಪೇಕ್ಷ ಲಕ್ಷಣವನ್ನು ಹೊಂದಿರಬೇಕೆಂದು ಬಯಸಿದ್ದರಿಂದ ಅದು ವಿವಿಧ ಸಮುದಾಯಗಳ ಜೀವನಗಳನ್ನು ನಿಯಂತ್ರಿಸಲು ಹೋಗಬಾರದು.'[7] ಎಂಬಂತಹ ಮಾತು ಅದೇಷ್ಟೋ ವ್ಯಕ್ತಿಗಳಿಗೆ ಮೂಲಭೂತವಾಗಿ ಬದುಕಲು ಅವರದೆ ಆದ ಸಂಸ್ಕೃತಿ ಆಚರಣೆಯಲ್ಲಿ ಬದುಕಲು ಸಾಧ್ಯವಾಗಿದೆ. ಈ ಮಾತಿನಂತೆ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದವರು ಒಗ್ಗೂಡಿ ಹೋರಾಟ ಮಾಡಿದ ಫಲ ಕಾನೂನಿನಲ್ಲಿ ಇವರ ಹಕ್ಕುಗಳು ಜೀವತಳೆಯಿತು ಎನ್ನಬಹುದು. ಬೆರಳೆಣಿಕೆಯ ಅಂಕಿ-ಸಂಖ್ಯೆಗೂ ಸಿಗದಿದ್ದ ಲಿಂಗತ್ವ ಅಲ್ಪಸಂಖ್ಯಾತರು 2011ರ ಜನಗಣತಿ ಪ್ರಕಾರ ಭಾರತದಲ್ಲಿ 49ಲಕ್ಷ ಸಂಖ್ಯೆ ಇರುವುದಾಗಿ ತಿಳಿದು ಬಂದಿತು. ಇವರಲ್ಲಿ ಶೇ. 66 ರಷ್ಟು ಮಂದಿ, ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದರೆ, ಇನ್ನುಳಿದವರು ಅವರ ಗುಂಪುಗಳಲ್ಲಿ, ಒಂದು ಏರಿಯಾದಲ್ಲಿ ಅಥವಾ ಪ್ರತ್ಯೇಕ ಬಾಡಿಗೆ ಮನೆಯೊಂದರಲ್ಲಿ, ನಗರ ಪಟ್ಟಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ತೃತೀಯ ಲಿಂಗಿಗಳ ಸಾಕ್ಷರತಾ ಪ್ರಮಾಣ ಕೇವಲ ಶೇ.46.ರಷ್ಟಿದೆ. ಒಟ್ಟು ಶೇ.38ರಷ್ಟು ಮಂದಿ ಮಾತ್ರ ದುಡಿಯುವವರು. ಕರ್ನಾಟಕದಲ್ಲಿ 2011ರ ಜನಗಣತಿ ಪ್ರಕಾರ 20,266

[7] *ಡಾ.ಬಾಬಾ ಸಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು.* (2013) ಸಂಪುಟ 14, ಭಾಗ 1, ಪು.38

ಲಿಂಗತ್ವ ಅಲ್ಪಸಂಖ್ಯಾತರು ಇರುವುದಾಗಿ ಕಂಡುಬಂದಿದೆ. ಇವರಿಗೆ 1994ರಲ್ಲಿ ಮತದಾನದ ಹಕ್ಕು ನೀಡಲಾಗಿದ್ದು, 2009ರಲ್ಲಿ ಚುನಾವಣಾ ಆಯೋಗ ಇವರಿಗೆ ಮತದ ಗುರುತಿನ ಚೀಟಿ ನೀಡಿದೆ. 2014ರ ಏಪ್ರಿಲ್ 15ರಂದು ಭಾರತದ ಸರ್ವೋಚ್ಚ ನ್ಯಾಯಲಯ ಇವರನ್ನು "ತೃತೀಯ ಲಿಂಗಿಗಳು" ಎಂದು ಪರಿಗಣಿಸಬೇಕೆಂಬ ಚರಿತ್ರಾರ್ಹ ತೀರ್ಪು ನೀಡುವುದರ ಜೊತೆಗೆ ಅವರನ್ನು ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗವೆಂದೂ ಗುರುತಿಸಿದೆ.[8] ಇದಕ್ಕೆ ಅಮರ್ತ್ಯ ಸೇನ್, ವಿಕ್ರಂ ಸೇಠ್, ಶ್ಯಾಮ್ ಬೆನಗಲ್ ಮೊದಲಾದ ಗಣ್ಯರುಗಳು ಬೆಂಬಲ ನೀಡಿದ್ದಾರೆ. "ಒಬ್ಬ ಮನುಷ್ಯ ಹಕ್ಕುಗಳಿಂದ ವಂಚಿತನಾಗುವುದನ್ನು ಯಾವುದೇ ಸಂಪ್ರದಾಯ, ಪರಂಪರೆ, ಧಾರ್ಮಿಕ ನಂಬಿಕೆ ಅಥವಾ ಸಾಂಸ್ಕೃತಿಕ ಮೌಲ್ಯಗಳು ಸಮರ್ಥಿಸಲು ಸಾಧ್ಯವೆ ಇಲ್ಲ" ಎಂದು ವಿಶ್ವ ಸಂಸ್ಥೆಯ ಕಾರ್ಯದರ್ಶಿ ಬಾನ್ ಕಿ ಮೂನ್ 2012ರಲ್ಲಿ ಹೇಳಿದ್ದಾರೆ. ಹಾಗಿದ್ದರು ಇವರು ಎದುರಿಸುತ್ತಿರುವ ಅವಮಾನ, ಶೋಷಣೆ, ತಾರತಮ್ಯದ ವಿರುದ್ಧ ನಡೆಯಬೇಕಾದ ಹೋರಾಟ ತುಳಿಯಬೇಕಾದ ದಾರಿ ಇನ್ನೂ ಇದೆ.

ಬಹಳಷ್ಟು ರಾಷ್ಟ್ರಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಒಳಗೊಂಡಂತೆ ಪ್ರತಿನಿಧಿಸುವ ಎಲ್‌ಜಿಬಿಟಿಐಕ್ಯೂ ಸಮುದಾಯದವರಿಗೆ ಕಾನೂನಿನ ಸಾಮಾಜಿಕ ಹೋರಾಟವಾದ ಮೇಲೆ 2014ರ ಫೆಬ್ರವರಿಯಲ್ಲಿ ಅಮೇರಿಕ ಹಾಗೂ ಪಶ್ಚಿಮ ಯೂರೋಪಿನ 17 ರಾಷ್ಟ್ರಗಳು ಸಲಿಂಗ ವಿವಾಹವನ್ನು ಮತ್ತು ಎಲ್‌ಜಿಬಿಟಿಐಕ್ಯೂಗೆ ಸಂಬಂಧಿಸಿದ ಹಲವಾರು ಹಕ್ಕುಗಳನ್ನು ಮಾನ್ಯ ಮಾಡಿದೆ. ನೆದರ್ ಲ್ಯಾಂಡ್, ಬೆಲ್ಜಿಯಂ, ಸ್ಪೆಯ್ನ್, ಕೆನಡಾ, ದ.ಆಫ್ರಿಕಾ, ನಾರ್ವೆ, ಸ್ವೀಡನ್, ಮೆಕ್ಸಿಕೊ, ಅರ್ಜೆಂಟೀನಾ, ಪೋರ್ಚುಗಲ್, ಐಸ್‌ಲ್ಯಾಂಡ್, ಬ್ರೆಜಿಲ್, ಫ್ರಾನ್ಸ್, ನ್ಯೂಜಿಲ್ಯಾಂಡ್, ಉರುಗ್ವೆ, ಇಂಗ್ಲೆಂಡ್, ವೇಲ್ಸ್, ಸ್ಕಾಟ್‌ಲ್ಯಾಂಡ್, ಮುಂತಾದ ರಾಷ್ಟ್ರಗಳು ಸಲಿಂಗ ವಿವಾಹವನ್ನು ಕಾನೂನು ಪ್ರಕಾರ ಮಾನ್ಯ ಮಾಡಿ ಕೆಲವು ಹಕ್ಕುಗಳನ್ನು ಸಹ ನೀಡಿದೆ. ಆದರೆ ಸಲಿಂಗ ಸಂಬಂಧ ಮತ್ತು ಸಲಿಂಗ ವಿವಾಹ ಎಂಬುದು ಭಾರತೀಯತೆ ಅಲ್ಲ, ಭಾರತೀಯ ಸಂಸ್ಕೃತಿಯೂ ಅಲ್ಲ ನೈಸರ್ಗಿಕವೂ ಅಲ್ಲ. ಇದು ಪಾಶ್ಚಾತ್ಯ ದೇಶಗಳಿಂದ ಬಂದ ಸಂಸ್ಕೃತಿ ಎಂದು ಕೇಂದ್ರ ಸರ್ಕಾರವು ವಾದಿಸಿತ್ತು. ಈ ಕುರಿತು ಸಲಿಂಗ ವಿವಾಹಕ್ಕೆ ಮಾನ್ಯತೆ ನೀಡಬೇಕು ಎಂದು ಕೋರಿದ್ದ ಅರ್ಜಿಗಳ ಸಂಬಂಧ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ನೇತೃತ್ವದ ಐವರು ನ್ಯಾಯಧೀಶರ ಸಂವಿಧಾನದ ಪೀಠವು 10 ದಿನಗಳ ನಿರಂತರ ವಿಚಾರಣೆಯ ನಂತರ ಮೇ 11ರಂದು ಕಾಯ್ದಿರಿಸಿದ್ದ ತೀರ್ಪನ್ನು ಇದೇ ವರ್ಷ ಆಕ್ಟೋಬರ್ 20ರಲ್ಲಿ 3:2ರ ಬಹುಮತದ ತೀರ್ಪನ್ನು ನೀಡಿದೆ.[9]

ಹೀಗೆ ಶತಮಾನದ ಉಲ್ಲೇಖಗಳಲ್ಲಿ ಕಾಣಿಸಿಕೊಂಡರು ಲಿಂಗತ್ವ ಅಲ್ಪಸಂಖ್ಯಾತರು ಮಾನಸಿಕ, ದೈಹಿಕ ಮತ್ತು ಭಾವನಾತ್ಮಕವಾಗಿ ಹೆಣ್ಣಾಗಿದ್ದರು ಹಲವಾರು ಸಮಸ್ಯೆಗಳು ಒಂದಲ್ಲ ಒಂದು ರೀತಿಯಲ್ಲಿ ಎದುರಾಗುತ್ತದೆ. ಲಿಂಗತ್ವವು ಸ್ತ್ರೀ ಪುರುಷನ ಸ್ಥಾನಮಾನ ಹಾಗೂ ಪಾತ್ರ ನಿರ್ಧರಿಸುತ್ತದೆ. ಸಾಮಾನ್ಯವಾಗಿ ಲಿಂಗತ್ವ ಸಂಬಂಧಗಳೆಂದರೆ ಸ್ತ್ರೀ ಪುರುಷರ ನಡುವಿನ ಅಧಿಕಾರ ಸಂಬಂಧಗಳ ಅನನ್ಯತೆಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರನ್ನು ಬೆಸೆದುಕೊಳ್ಳಬೇಕು. ಒಂದು ಕಡೆ ಹುಟ್ಟು ಗಂಡಾದರೆ ಬದುಕು ಹೆಣ್ಣಾಗಿರುತ್ತದೆ ಅಥವಾ ಹುಟ್ಟು ಹೆಣ್ಣಾದರೆ ಬದುಕು ಗಂಡಾಗಿರಬಹುದು ಇದು ಇವರ ಭಾವನಾತ್ಮಕತೆಯ ಆಯ್ಕೆ ಪ್ರಧಾನವಾದದ್ದು.

---

[8] ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ಸ್ ನೀತಿ–2017.

[9] ಸುಪ್ರೀಂ ಕೋರ್ಟ್ ತೀರ್ಪು. (2023, ಆಗಸ್ಟ್ 17). ನಾನು ಗೌರಿ.ಕಾಮ್

ಪರಿವರ್ತನ ಲಿಂಗತ್ವಕ್ಕೆ, ಲೈಂಗಿಕತೆಗೆ ಸಮಾಜ ಗೌರವಿಸಬೇಕು ಮೂಲ ಲಿಂಗವನ್ನ ಪ್ರಚುರ ಪಡಿಸಲು ಇಚ್ಚಿಸದ ಅವರ ನಿರ್ಣಯಕ್ಕೆ ಅಂಗೀಕರಿಸಬೇಕು. ಒಟ್ಟಾರೆಯಾಗಿ ನನ್ನ ದೇಹ ನನ್ನ ಹಕ್ಕು. ನನ್ನ ಲಿಂಗತ್ವ ನನ್ನ ಹಕ್ಕು. ನನ್ನ ಲೈಂಗಿಕತೆ ನನ್ನ ಹಕ್ಕು. ನನ್ನ ಲಿಂಗ ನನ್ನ ಹಕ್ಕು ಎಂಬುದನ್ನು ಸರ್ಕಾರವೆ ಇವರಿಗೆ ಮಾನ್ಯತೆ ನೀಡಿದೆ ಎಂಬುದನ್ನು ಆದ್ಯತೀಕರಿಸಬೇಕು. ಮೊಲೆ ಇಲ್ಲದ, ಹಾಲುಣಿಸದ ಋತುಮತಿಯಾಗದ, ಗರ್ಭಧರಿಸದ ಹೆಣ್ಣಾಗಿ ಹಲವರಿಗೆ ತಾಯಿಯಾಗಿದ್ದಾರೆ. ಈ ಸತ್ಯವನ್ನು ಸಮಾಜ ಒಪ್ಪಿಕೊಳ್ಳಬೇಕು ವಾಸ್ತವಿಕವಾಗಿ ಅಂತಃಕರಣ ಮಾಡಿಕೊಳ್ಳಬೇಕಾಗಿದೆ.

ಪ್ರಪಂಚದ ಜೀವರಾಶಿಗಳೆಲ್ಲದರಲ್ಲೂ ಪುರುಷತ್ವ, ಸ್ತ್ರೀತ್ವ, ನಪುಂಸಕತ್ವ ಇದ್ದರೂ ಮನುಷ್ಯ ಜೀವಿಯಲ್ಲಿ ಮಾತ್ರ ಗುರುತಿಸಲ್ಪಡುತ್ತಿರುವುದು ಹೆಣ್ಣು ಮತ್ತು ಗಂಡೆಂದು. ಮಾನವ ಎಂದೆನಿಸಿಕೊಂಡ ಇವನು ಗಂಡು ಹೆಣ್ಣಿನ ಸ್ಥಾನಮಾನ, ನಿಯಮಗಳನ್ನು ಸೃಷ್ಟಿಸಿದ್ದಾನೆ. ಈ ಎರಡರ ಸ್ಥಾನಗಳಲ್ಲಿ ಗುರುತಿಸಿಕೊಳ್ಳಲಾಗದ ಗುಂಪು ಎಂದು ಗುರುತಿಸಿಕೊಂಡು ಲಿಂಗತ್ವ ಅಲ್ಪಸಂಖ್ಯಾತರು, ಎಷ್ಟೊಂದು ಸಮಸ್ಯೆಗಳನ್ನು, ಅವಮಾನದ ಪ್ರಸಂಗಗಳು ಎದುರಿಸಿದ್ದಾರೆ. ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಪ್ರತಿನಿತ್ಯ ಅನುಭವಿಸುತ್ತಿದ್ದಾರೆ. ಈ ಸಮುದಾಯದ ವ್ಯಕ್ತಿಗಳು ದೈಹಿಕ ಬೆಳವಣಿಗೆಯು ಸಹಜತೆಯಿಂದ ಕೂಡಿರುವುದಿಲ್ಲ. ಎಲ್ಲಾ ಕ್ಷೇತ್ರಗಳಲ್ಲಿಯೂ ಕೂಡ ಕೈಲಾಗದ ಅಸಮರ್ಥರು ಎಂಬ ಮನೊಧೋರಣೆಯುಳ್ಳ ಪೌರುಷತೆಗೆ ಸೆಡ್ಡು ಒಡೆಯಲು ಲಿಂಗಪರಿವರ್ತಿತರು ಸೆಟೆದು ನಿಲ್ಲ ಬೇಕಾಗಿರುವುದು ಪ್ರಸ್ತುತವಾಗಿ ಅವಶ್ಯಕವಾಗಿದೆ. ಜೊತೆಗೆ ಇವರಲ್ಲಿರುವ ಕೀಳರಿಮೆ ತೊಡೆದು ಹಾಕಲು ಸಹ ಶೋಷಿತರು, ದಮನಿತರು, ಸಂಘಟನೆಯವರು, ಶೈಕ್ಷಣಿಕ ಸಂಸ್ಥೆಗಳು ಕಂಕಣ ಬದ್ಧವಾಗಿ ಇನ್ನು ಹೆಚ್ಚಿನ ಪ್ರಮಾಣದಲ್ಲಿ ನಿಲ್ಲಬೇಕಿದೆ. ಆಗ ಮಾತ್ರ ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ದೊರೆತಂತಾಗಿ ಲಿಂಗತ್ವ ಅಲ್ಪಸಂಖ್ಯಾತರ ಬದುಕು ಹಸನಾಗಲು ದಾರಿದೀಪವಾಗುತ್ತದೆ. ಆದರೆ ಸಾಮಾಜಿಕವಾಗಿ ದೃಢವಾಗಿ ನಿಂತವರಿಗೆ ಸಿಕ್ಕಷ್ಟು ರಂಗಗಳಲ್ಲಿ ಮುಕ್ತವಾಗಿ ಅವಕಾಶಗಳು ಸಂವಿಧಾನದ ರಕ್ಷಣೆಯಲ್ಲಿ ದೊರೆಯಿತ್ತಿರುವುದು ಲಿಂಗತ್ವ ಅಲ್ಪಸಂಖ್ಯಾತರ ಧನ್ಯತಾ ದೃಷ್ಟಿಯಾಗಿದೆ.

**ಆಧಾರ ಗ್ರಂಥಗಳು**


- ಅನಂತರಾಮ ರಾವ್ ಕೆ. (2013). *ಸಂಪೂರ್ಣ ಮಹಾಭಾರತ (ಹದಿನೆಂಟು ಪರ್ವಗಳು).* ವಿದ್ಯಾ ಪಬ್ಲಿಶಿಂಗ್ ಹೌಸ್.
- ಅರವಿಂದ ಮಾಲಗತ್ತಿ. (ಸಂ.) (2006). *ವಿಷಯ ವಿಶ್ವಕೋಶ (ಜಾನಪದ).* ಮೈಸೂರು ವಿಶ್ವವಿದ್ಯಾಲಯ. ಪು. 414
- ಆಳ–ಅಗಲ (2023, ಅಕ್ಟೋಬರ್ 21). ಪ್ರಜಾವಾಣಿ ದಿನ ಪತ್ರಿಕೆ. ಪು.5
- *ಡಾ.ಬಾಬಾ ಸಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು.* (2013) ಸಂಪುಟ 14, ಭಾಗ 1, ಪು.38
- ಫ್ರೈಡ್ ಆಫ್ ಇಂಡಿಯಾ (2012). *ಭಾರತೀಯ ವೈಜ್ಞಾನಿಕ ಪರಂಪರೆಯ ಒಂದು ಇಣುಕು ನೋಟ.* ಪು.131

- *ಕನ್ನಡ ವಿಶ್ವಕೋಶ ಸಂಪುಟ–13.* (1998). ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.
- *ಕರ್ನಾಟಕ ರಾಜ್ಯ ಟ್ರಾನ್ಸ್‌ಜೆಂಡರ್ಸ್ ನೀತಿ–2017.*
- ನೂರಾರು ಶರಣರ ಸಾವಿರ ವಚನಗಳು, ಡಾ.ಎಲ್. ಬಸವರಾಜು, ಮುದ್ದುಶ್ರೀ ಗ್ರಂಥಮಾಲೆ, ಬೆಂಗಳೂರು–2008.
- ಶಿವರಾಮಯ್ಯ. (2012). *ವೇಶ್ಯಯರು ಮತ್ತು ಲೈಂಗಿಕ ಅಲ್ಪಸಂಖ್ಯಾತರು ನಡೆದು ಬಂದ ದಾರಿ.* ಸೃಷ್ಟಿ ಪಬ್ಲಿಕೇಷನ್ಸ್,
- ಸುಪ್ರೀಂ ಕೋರ್ಟ್ ತೀರ್ಪು. (2023, ಆಗಸ್ಟ್ 17). ನಾನು ಗೌರಿ.ಕಾಮ್
- Deeptha Rao V N. (2021). *Handbook on the Transgender Persons (Protection of Rights-2020*). The Alternative law Forum.
- Jane Pilcher and Imelda whelehan. (2013). *Fifty Key Concepts in Gender studies.* SAGE publications Ltd